# ‘ನನ್ನ ಕಾರು, ನನ್ನ ವಾಯ್ಸ್’

■ ಶಶಿಕುಮಾರ್ ಸಿ.



ಧ್ವನಿ ಸಹಾಯಕ ತಂತ್ರಾಂಶಗಳು ಈಗ ತಂತ್ರಜ್ಞಾನ ಲೋಕದಲ್ಲಿ ಸದ್ದು ಮಾಡುತ್ತಿವೆ. ಆ ಪೈಕಿ ಮುಂಚೂಣಿಯಲ್ಲಿರುವ ತಂತ್ರಾಂಶಗಳೆಂದರೆ, ಆ್ಯಪಲ್ ಕಂಪನಿಯ ‘ಸಿರಿ’, ಗೂಗಲ್‌ನ ‘ಗೂಗಲ್ ಅಸಿಸ್ಟೆಂಟ್’, ಅಮೆಜಾನ್‌ನ ‘ಅಲೆಕ್ಸಾ’ ಇತ್ಯಾದಿ. ಈ ಸಾಲಿಗೆ ‘ಮೈ ಕಾರ್, ಮೈ ವಾಯ್ಸ್’ ಅನ್ನೋ ಧ್ವನಿ ಸಹಾಯಕ ತಂತ್ರಾಂಶ ಪ್ರಧಾನವಾಗಿರುವ ಸಾಧನವನ್ನು ಸೆರೆನ್ಸ್ ಕಂಪನಿಯು ಅಭಿವೃದ್ಧಿ ಪಡಿಸಿ ಈಚೆಗೆ ಆಟೊಮೊಬೈಲ್ ಕ್ಷೇತ್ರಕ್ಕೆ ಪರಿಚಯಿಸಿದೆ.

ಸಹಜವಾಗಿ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಸುವವರಿಗೆ ‘ಗೂಗಲ್ ಅಸಿಸ್ಟೆಂಟ್’ ಮತ್ತು ಐಫೋನ್ ಬಳಸುವವರಿಗೆ ‘ಸಿರಿ’ಯ ಪ್ರಯೋಜನದ ಬಗ್ಗೆ ಅರಿವು ಇದ್ದೇ ಇರುತ್ತದೆ. ಇವು ತಮ್ಮ ಫೋನ್‌ಗಳ ವಿವಿಧ ಕೆಲಸಗಳನ್ನು ಮಾಡಲು ಸಹಕರಿಸುತ್ತವೆ. ‘ಅಲೆಕ್ಸಾ’ ಸಹ ಇದಕ್ಕೆ ಹೊರತಾಗಿಲ್ಲ.

ಆದರೆ ಇವುಗಳಿಗಿಂತ ವಿಭಿನ್ನತೆಯಿಂದ ಕೂಡಿರುವುದು ‘ಮೈ ಕಾರ್, ಮೈ ವಾಯ್ಸ್’. ಕಾರುಗಳಿಗೆಂದೇ ಇದನ್ನು ವಿಶೇಷವಾಗಿ ಅಭಿವೃದ್ಧಿಪಡಿಸಲಾಗಿದೆ. ಧ್ವನಿ ಆಧಾರಿತವಾಗಿ ಕಾರ್ಯನಿರ್ವಹಿಸುವ ಈ ಸಾಧನವು ಟೊಯೋಟ, ಜನರಲ್ ಮೋಟಾರ್ಸ್, ಆಡಿ, ಕ್ರಿಸ್ಲರ್ ಮತ್ತು ಬಿಎಂಡಬ್ಲ್ಯೂ ಕಂಪನಿಯ ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಹಾಗೂ ಐಷಾರಾಮಿ ಕಾರುಗಳಲ್ಲಿ ಬಳಸಬಹುದು.

cerence™

‘ಗೂಗಲ್ ಅಸಿಸ್ಟೆಂಟ್’, ‘ಸಿರಿ’ ಹಾಗೂ ‘ಅಲೆಕ್ಸಾ’ನಲ್ಲಿ ಸಿದ್ಧಮಾದರಿಯ ಧ್ವನಿಯೊಂದು ಕೇಳಿಬರುತ್ತದೆ. ಆದರೆ, ‘ಮೈ ಕಾರ್ ಮೈ ವಾಯ್ಸ್’ಗೆ ಬಳಕೆದಾರರು ತಮ್ಮದೇ ಧ್ವನಿಯನ್ನು ಅಳವಡಿಸಿ ಆಲಿಸಬಹುದು. ಅದಕ್ಕಾಗಿ ಬಳಕೆದಾರರು ಮೊದಲು ತಮ್ಮ ಧ್ವನಿಯನ್ನು ಈ ಸಾಧನಕ್ಕೆ ಅಳವಡಿಸಿ ಹೊಂದಿಸಬೇಕು. ಇದು ಈ ಸಾಧನದ ವಿಶೇಷ. ಕೆಲ ಉಚ್ಚಾರವನ್ನು ಮೊದಲೇ ಇದಕ್ಕೆ ಫೀಡ್ ಮಾಡಿದ್ದರೆ ನಂತರ ತಾನಾಗಿಯೇ ಕಾರ್ಯ ನಿರ್ವಹಿಸುತ್ತದೆ. ಬಹುತೇಕ ಬಳಕೆದಾರರ ಧ್ವನಿಯ ರೀತಿಯಲ್ಲೇ ಮಾಹಿತಿ ನೀಡತೊಡಗುತ್ತದೆ.

ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ತಂತ್ರಾಂಶದ ಆಧಾರದ ಮೇಲೆ ‘ಮೈ ಕಾರ್ ಮೈ ವಾಯ್ಸ್’ ರೂಪಿತವಾಗಿದೆ. ಕಾರು ಚಾಲನೆ ವೇಳೆ ಚಾಲಕನ ಸಹಾಯಕ್ಕೆ ಬರುವ ಇದು, ತಮ್ಮ ಕಾರಿನೊಂದಿಗೆ ಆಪ್ತತೆ ಹೆಚ್ಚಾಗಲು ಇದು ಪ್ರಭಾವ ಬೀರುತ್ತದೆ. ಇದನ್ನು ಡೀಲರ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಡಿಎಂಎಸ್) ವ್ಯವಸ್ಥೆ ಮೂಲಕ ಕಾರಿಗೆ ಅಳವಡಿಸಲಾಗುತ್ತದೆ.

ಟಚ್ ಸ್ಕ್ರೀನ್ ಆಯ್ಕೆಗಳುಳ್ಳ ಕಾರುಗಳಲ್ಲಿ ಬಳಸಬಹುದಾದ ಈ ಸಾಧನವು ಕಾರಿನ ಚಾಲಕ ಮತ್ತು ಕಾರಿನೊಂದಿಗೆ ದೀರ್ಘಕಾಲದವರೆಗೆ ಸಂಪರ್ಕ ಹೊಂದಿರುತ್ತದೆ. ಸೆರೆನ್ಸ್ ಡ್ರೈವ್ ಪೋರ್ಟ್‌ಫೋಲಿಯೊದ ಮಿತಿಯೊಳಗೆ ಗೂಗಲ್, ಸಿರಿ, ಅಮೆಜಾನ್, ಬೈದು, ಅಲಿಬಾಬಾ ಯಂಡೆಕ್ಸ್ ಸೇರಿದಂತೆ ಹಲವು ವಾಯ್ಸ್ ಅಸಿಸ್ಟೆಂಟ್ಸ್‌ಗಳ ಜೊತೆಗೂ ಸಂಯೋಜಿಸಿ ಕಾರ್ಯನಿರ್ವಹಿಸಬಹುದು.

ಚಾಲಕ ಕೇಳುವ ಕಾರಿನ ಕುರಿತಾದ ಪ್ರಶ್ನೆಗಳಿಗೆ ಉತ್ತರ ಹಾಗೂ ಮಾಹಿತಿಯನ್ನು ತಕ್ಷಣವೇ ಇದು ಒದಗಿಸುತ್ತದೆ. ಅದಕ್ಕಾಗಿ ಅಂತರ್ಜಾಲ, ಜಿಪಿಎಸ್ ಸಂಪರ್ಕವನ್ನು ಇದು ಪಡೆದಿರುತ್ತದೆ. ನಾವಿಗೇಷನ್, ಟ್ರಾಫಿಕ್ ಅಪ್‌ಡೇಟ್ ಅನ್ನೂ ನಿಖರವಾಗಿ ತಿಳಿಸುತ್ತದೆ.

‘ಬಳಕೆದಾರರು ತಮ್ಮ ಕಾರುಗಳನ್ನು ಹೆಚ್ಚಾಗಿ ಇಷ್ಟ ಪಡಲು ಅವುಗಳೊಂದಿಗೆ ಆಪ್ತತೆ ಬೆಳೆಸಿಕೊಳ್ಳಲು ಸೆರೆನ್ಸ್‌ನ ಈ ಸಾಧನ ಸೇತುವೆಯಾಗಿದೆ. ಅದಕ್ಕಾಗಿಯೇ ಚಾಲನೆಯನ್ನು ಮತ್ತಷ್ಟು ಸಲೀಸಾಗಿಸಲು ಈ ಸಾಧನವನ್ನು ನಾವು ಅಭಿವೃದ್ಧಿಪಡಿಸಿದ್ದೇವೆ’ ಎಂಬುದು ಕಂಪನಿಯ ಕೋರ್ ಆಟೊಮೇಟಿವ್ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಸ್ಟೀಫನ್ ಆರ್ಟ್ಮನ್ಸ್ ಮಾತು.

‘ಈಚೆಗೆ ಮಾರುಕಟ್ಟೆಗೆ ಬರುತ್ತಿರುವ ಕಾರುಗಳ ದಿನೇ ದಿನೇ ಹೆಚ್ಚು ಹೆಚ್ಚು ಸಂಕೀರ್ಣಗೊಳ್ಳುತ್ತಿವೆ. ಹಲವು ಫೀಚರ್, ನೋಟಿಫಿಕೇಷನ್ಸ್, ವಾರ್ನಿಂಗ್ ಲೈಟ್ಸ್ ಮತ್ತು ವಾಹನದ ಕೆಲವೊಂದು ಬಟನ್‌ಗಳನ್ನು ಬಳಸಲು ಕಾರು ಚಾಲಕರಿಗೆ ಆಗುತ್ತಿರುವ ತೊಂದರೆ ಈ ಸಂಕೀರ್ಣತೆಯಿಂದಾಗಿ ಹೆಚ್ಚಾಗುತ್ತಲೇ ಇದೆ. ಹೀಗಾಗಿ, ಅದನ್ನು ತೀರಾ ಸರಳೀಕರಣ ಮಾಡಲು ಈ ಧ್ವನಿ ಸಹಾಯಕ ತಂತ್ರಾಂಶ ಸಹಕಾರಿಯಾಗಲಿದೆ’ ಎಂಬುದು ಕಂಪನಿಯ ವಿಶ್ಲೇಷಣೆ.

‘ಫಾಸ್ಟ್ ಮೂವಿಂಗ್’ ಸಮಯವಿದು. ಇದಕ್ಕೆ ತಕ್ಕ, ಸೂಕ್ತವಾದ ಸಾಧನ ಇದಾಗಿದೆ. ವಾರ್ನಿಂಗ್ ಲೈಟ್ಸ್, ಎರರ್ ಮೆಸೇಜ್‌ಗಳನ್ನು ಸಮಸ್ಯೆ ಎದುರಾದ ತಕ್ಷಣಕ್ಕೆ ಚಾಲಕನ ಗಮನಕ್ಕೆ ಧ್ವನಿಯ ಮೂಲಕ ಇದು ತರುತ್ತದೆ. ಈ ಸಮಸ್ಯೆಯನ್ನು ಸರಿಪಡಿಸುವುದು ಹೇಗೆ ಅನ್ನೋದರ ಅತ್ಯಾಧುನಿಕ ಮಾಹಿತಿಯನ್ನು ಕಾರಿನ ಸೆನ್ಸರ್ ಗ್ರಹಿಸಿ ತಿಳಿಸುತ್ತದೆ. ಆ ಮೂಲಕ ಕಾರಿನ ವಸ್ತುಸ್ಥಿತಿ ತಿಳಿದುಕೊಳ್ಳಲು ನೆರವು ನೀಡುತ್ತದೆ. ■